**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ7(8)ಪ್ರಾ.ಶಿ.ಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ: 19-05-2016

**: :ಸಾರ್ವಜನಿಕ ಪ್ರಕಟಣೆ: :**

ವಿಷಯ:2016-17 ನೇ ಸಾಲಿಗೆ ಮೊದಲನೇ ಹಂತದ ಲಾಟರಿಯಲ್ಲಿ ಆಯ್ಕೆಯಾದ ಮಕ್ಕಳ ದಾಖಲಾತಿ ಗಡುವಿನ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಸೂಚನೆ ಮೇರೆಗೆ.

*************

2016-17 ನೇ ಸಾಲಿನ ಶೈಕ್ಷಣಿಕ ಸಾಲಿಗೆ ಆರ್.ಟಿ.ಇ ಅಡಿ ಮೊದಲನೇ ಹಂತದಲ್ಲಿ ಆನ್‌ಲೈನ್ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳನ್ನು ದಾಖಲು ಮಾಡಲು ದಿನಾಂಕ:20.05.2016 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ದಾಖಲಾತಿ ಮಾಡಲು ಹೆಚ್ಚಿನ ಕಾಲಾವಕಾಶದ ಅವಶ್ಯಕತೆ ಇದೆ ಎಂಬುದನ್ನು ಗಮನಿಸಿ ಇಲಾಖೆಯು ದಾಖಲಾತಿ ಗಡುವನ್ನು ದಿನಾಂಕ:20.05.2016 ರಿಂದ 23.05.2016 ರವರೆಗೆ ವಿಸ್ತರಿಸಿದೆ. ಆರ್.ಟಿ.ಇ ಸೀಟುಗಳನ್ನು ಭರ್ತಿ ಮಾಡಲು ಸಂಬಂಧಿಸಿದ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದ ಶಾಲಾ ಮುಖ್ಯಸ್ಥರಿಗೆ ನಿರ್ದೇಶನ ನೀಡುವುದು. ಸದರಿ ದಿನಾಂಕದೊಳಗೆ ಪ್ರವೇಶ ಪಡೆಯದ ಸೀಟುಗಳು ತಂತಾನೇ ರದ್ದಾಗುತ್ತವೆ. ಆದುದರಿಂದ ಅರ್ಹ ದಾಖಲೆಗಳನ್ನು ಪರಿಶೀಲಿಸಿಕೊಂಡು ಆಯ್ಕೆಯಾದ ಶಾಲೆಗಳಲ್ಲಿ ದಾಖಲಾಗಲು ಈ ಮೂಲಕ ತಿಳಿಸಿದೆ.

ಪ್ರವೇಶ ಪ್ರಕ್ರಿಯೆ ಮುಗಿದ ಕೂಡಲೇ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಂದಂದಿಗೆ ದಾಖಲಾದ ಮಕ್ಕಳ ಮಾಹಿತಿಯನ್ನು ಆನ್‌ಲೈನ್ ತಂತ್ರಾಂಶದಲ್ಲಿ ಅಪಡೇಟ್ ಮಾಡುವುದು. ಈ ಬಗ್ಗೆ ಯಾವುದೇ ವಿಳಂಬಕ್ಕೆ ಅವಕಾಶ ಮಾಡಿಕೊಡದೇ ದಾಖಲಾತಿ ಪ್ರಕ್ರಿಯೆ ಚುರುಕುಗೊಳ್ಳಲು ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

(ವಿ.ಪೊನ್ನುರಾಜ್)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.